ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 22-01-1971.

*ಹೃದಯ ಸಿಂಹಾಸನಧಾರಿ ಆತ್ಮನ ಲಕ್ಷಣಗಳು* (दिलतख्त-नशीन आत्मा की निशानी)

ಇಂದು ಈ ಸಂಘಟನೆಯನ್ನು ಯಾವ ಸಂಘಟನೆ ಎಂದು ಕರೆಯುವಿರಿ? ಈ ಸಂಘಟನೆಗೆ ಏನೆಂದು ಹೆಸರು ಕೊಡುವಿರಿ? ಈ ಸಂಘಟನೆ ಬ್ರಹ್ಮಾತಂದೆಯ ಭುಜಗಳ ಸಂಘಟನೆಯಾಗಿದೆ. ಆದ್ದರಿಂದ ಈ ಸಂಘಟನೆಯನ್ನು ಬಾಪ್ ದಾದಾರ ಸಹಯೋಗಿ, ವಿಶ್ವಾಸೇವಾಧಾರಿ, ಬಾಪ್ ದಾದಾರವರ ಹೃದಯ ಸಿಂಹಾಸನಾಧಿಕಾರಿ, ಮಾಸ್ಟರ್ ಸರ್ವಶಕ್ತಿವಂತ ಎನ್ನಲಾಗುವುದು. ಈ ಎಲ್ಲಾ ಟೈಟಲ್ ಗಳು ಈ ಗುಂಪಿಗೆ ನಂಬರ್ ವಾರ್ ಪುರುಷಾರ್ಥದ ಅನುಸಾರ ಇವೆ ಎಂದು ಈಗ ತಿಳಿಯಿತೇ? ಯಾರು ಹೃದಯ ಸಿಂಹಾಸನಾಧಿಕಾರಿಯೋ ಅವರ ಲಕ್ಷಣಗಳೇನು? ಶಿಕ್ಷಕಿಯರಾಗಿರುವುದರಿಂದ ಪ್ರಶ್ನೋತ್ತರ ಮಾಡುತ್ತಿದ್ದೇವೆ. ಸಿಂಹಾಸನಾಧಿಕಾರಿಗಳ ಲಕ್ಷಣಗಳೇನು? ಯಾರು ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾರೋ ಅವರಿಗೆ ತಿಲಕ ಮತ್ತು ಕಿರೀಟ ಎರಡೂ ಲಕ್ಷಣಗಳಾಗಿವೆ. ಅದೇ ರೀತಿ ಹೃದಯ ಸಿಂಹಾಸನದ ಮೇಲೆ ವಿರಾಜಮಾನವಾದ ಆತ್ಮರ ಲಕ್ಷಣಗಳೂ ಇವೇ ಆಗಿವೆ. 1. ಅವರ ಮಸ್ತಕದಲ್ಲಿ ಸದಾ ಅವಿನಾಶಿ ಆತ್ಮಿಕ ಸ್ಥಿತಿಯ ತಿಲಕ ದೂರದಿಂದ ಹೊಳೆಯುತ್ತಾ ಕಂಡುಬರುವುದು. 2. ಸರ್ವಾತ್ಮರ ಕಲ್ಯಾಣದ ಶುಭಭಾವನೆ ಅವರ ಕಣ್ಣುಗಳಿಂದ, ಮುಖದಿಂದ ಸ್ಪಷ್ಟವಾಗಿ ಕಂಡುಬರುವುದು. 3. ಅವರ ಸಂಕಲ್ಪ, ಮಾತು ಮತ್ತು ಕರ್ಮ ತಂದೆಯ ಸಮಾನವಾಗಿರುವವು. 4. ಯಾವ ಆತ್ಮರ ಸೇವೆ ಅವರು ಮಾಡುವರೋ ಅವರಲ್ಲಿ ಸ್ನೇಹ, ಸಹಯೋಗ ಮತ್ತು-ಶಕ್ತಿ ಈ ಮೂರು ಗುಣಗಳನ್ನು ಧಾರಣೆ ಮಾಡಿಸಲು ಅವರಲ್ಲಿ ಶಕ್ತಿಯಿರುತ್ತದೆ. ಈ ನಾಲ್ಕು ವಿಷಯಗಳು ಅವರ ಲಕ್ಷಣಗಳಾಗಿವೆ. ಈಗ ತಮ್ಮಲ್ಲಿ ಈ ನಾಲ್ಕು ಲಕ್ಷಣಗಳು ಎಲ್ಲಿಯವರೆಗೆ ಕಂಡುಬರುತ್ತವೆ ಎಂಬ ಫಲಿತಾಂಶವನ್ನು ಪರಿಶೀಲನೆ ಮಾಡಿ. ಯಾರು ಹೇಗಿರುತ್ತಾರೋ ಹಾಗೆ ತಮ್ಮ ಸಮಾನ ಮಾಡುತ್ತಾರೆ. ಇಂದು ಶಿಕ್ಷಕಿಯರ ಸಂಘಟನೆಯಲ್ಲಿರುವ ಕಾರಣ ಇದನ್ನು ಹೇಳುತ್ತಿದ್ದೇವೆ. ಯಾರ ಸೇವೆ ಮಾಡುತ್ತೀರೋ ಅಥವಾ ಮಾಡುತ್ತಿರುವಿರೋ ಅವರಲ್ಲಿ ಈ ಎಲ್ಲಾ ಮಾತುಗಳು ತುಂಬಿರಬೇಕು. ಇಲ್ಲಿಯವರೆಗೆ ಫಲಿತಾಂಶವೇನಿದೆ? ಪ್ರತಿಯೊಬ್ಬರೂ ತಮ್ಮ ಫಲಿತಾಂಶವನ್ನು ನೋಡುತ್ತಿರಲ್ಲವೇ? ಹೆಚ್ಚಿನಾಂಶ ಏನು ಕಂಡುಬರುತ್ತದೆ? ಕೆಲವರಲ್ಲಿ ಸ್ನೇಹದ ವಿಶೇಷತೆಯಿದೆ, ಕೆಲವರಲ್ಲಿ ಸಹಯೋಗದ, ಆದರೆ ಶಕ್ತಿರೂಪದ ಧಾರಣೆ ಕಡಿಮೆಯಿದೆ. ಇದರ ಲಕ್ಷಣ ಏನು ಕಂಡುಬರುತ್ತದೆ ಗೊತ್ತೇ? ಶಕ್ತಿಯ ಕೊರತೆಯ ಲಕ್ಷಣ ಏನು ಕಂಡುಬರುತ್ತದೆ? ಪರೀಕ್ಷಿಸುವ ಶಕ್ತಿಯ ಕೊರತೆಯ ಲಕ್ಷಣವೇನು? ಸೇವೆಯಲ್ಲಿ ಸಫಲತೆಯಿರುವುದಿಲ್ಲ ಎಂಬ ಒಂದು ಮಾತನ್ನು ಹೇಳಿದೆವು. ಅವರ ಸ್ಪಷ್ಟ ಲಕ್ಷಣ ಎರಡು ಶಬ್ದಗಳಲ್ಲಿ ಹೇಳುವುದಾದರೆ - ಅವರ ಪ್ರತಿ ಮಾತು "ಏಕೆ", "ಏನು", "ಹೇಗೆ" ....? ಪ್ರಶ್ನಾರ್ಥಕ ಬಹಳ ಇರುವವು. ಡ್ರಾಮಾದ ದೃಶ್ಯಕ್ಕೆ ಪೂರ್ಣ ವಿರಾಮವಿಡುವುದು ಅವರಿಗೆ ಬಹಳ ಕಷ್ಟವಾಗುವುದು. ಆದ್ದರಿಂದ ತಾವೇ ಏಕೆ, ಏನು, ಹೇಗೆ ಎಂಬ ತೊಡಕಿನಲ್ಲಿ ಸಿಲುಕಿರುವರು. ಇನ್ನೊಂದು ಮಾತು – ಅವರು ಎಂದೂ ಸಮೀಪ ಆತ್ಮರನ್ನು ತಯಾರು ಮಾಡಲಾರರು. ಸಂಬಂಧದಲ್ಲಿ ತರಬಲ್ಲರು ಆದರೆ ಸಮೀಪ ಸಂಬಂಧದಲ್ಲಿ ತರುವುದಿಲ್ಲ. ತಿಳಿಯಿತೇ? ಬ್ರಾಹ್ಮಣ ಕುಲದ ಮರ್ಯಾದೆಗಳ ಸ್ವರೂಪರನ್ನಾಗಿ ಇತರರನ್ನು ತಯಾರು ಮಾಡಲಾರರು. ಏಕೆಂದರೆ ಸ್ವಯಂನಲ್ಲಿ ಶಕ್ತಿ ಕಡಿಮೆಯಿರುವುದರಿಂದ ಮರ್ಯಾದೆಗಳನ್ನು ಪಾಲನೆ ಮಾಡುವಷ್ಟು ಶಕ್ತಿಯನ್ನು ಬೇರೆಯವರಲ್ಲಿಯೂ ತರಲಾರರು. ಒಂದಿಲ್ಲೊಂದು ಮರ್ಯಾದೆಯ ರೇಖೆಯನ್ನು ಉಲ್ಲಂಘಿಸುವರು. ಎಲ್ಲಾ ಮರ್ಯಾದೆಗಳನ್ನು ತಿಳಿದರೂ ಅದರಂತೆ ನಡೆಯುವ ಶಕ್ತಿ ಕಡಿಮೆಯಿರುವುದು. ಆ ಕಾರಣದಿಂದ ಯಾರ ಸೇವೆಯನ್ನು ಅವರು ಮಾಡುತ್ತಾರೆಯೋ ಅವರಲ್ಲಿಯೂ ಶಕ್ತಿ ಕಡಿಮೆಯಿರುವ ಕಾರಣ ಅವರು ಎತ್ತರಕ್ಕೆ ಹಾರಲಾರರು. ಸಂಸ್ಕಾರಗಳನ್ನು ಅಳಿಸಲು ಬಹಳ ಸಮಯ ವ್ಯರ್ಥವಾಗಿ ಕಳೆಯುತ್ತೀರಿ. ಈಗ ಈ ಮಾತುಗಳಿಂದ ತಮ್ಮ ಸ್ವರೂಪವನ್ನು ಪರಿಶೀಲನೆ ಮಾಡಿಕೊಳ್ಳಿ. ಮರದ ಬಗೆಗೆ ಎಲ್ಲಾ ಮಾತುಗಳ ಕಡೆಗೆ ಗಮನ ನೀಡಿದಾಗ ಉತ್ತಮ, ಸಿಹಿಯಾದ ಹಣ್ಣು ಸಿಗುತ್ತದೆ. ಭೂಮಿಯನ್ನು ಅಗೆದು ಬೀಜವನ್ನು ಬಿತ್ತಲು, ನೀರನ್ನು ಹಾಕಲು ಗಮನ ಕೊಡಬೇಕಾಗುತ್ತದೆ. ಇಂತಹ ಶ್ರೇಷ್ಠ ಫಲ ತಯಾರು ಮಾಡಲು ಸಂಸ್ಕಾರ

ಅಳಿಸುವ ಶಕ್ತಿಯಾಗಿದೆ ಭೂಮಿಯನ್ನು ಅಗೆಯುವುದು. ಅದರ ಜೊತೆಗೆ ಇನ್ನುಳಿದ ವಸ್ತುಗಳನ್ನು ಹೇಗೆ ಹಾಕಲಾಗುವುದೋ ಅವಾಗಿವೆ ಸ್ನೇಹಿಯಾಗಿ ತಯಾರು ಮಾಡುವುದು, ಸಹಯೋಗಿಯಾಗಿ ತಯಾರು ಮಾಡುವುದು ಮತ್ತು ಶಕ್ತಿ-ಸ್ವರೂಪವಾಗಿ ತಯಾರು ಮಾಡುವುದು. ಯಾವುದೊಂದರ ಕೊರತೆಯಿದ್ದರೂ ಏನಾಗುತ್ತದೆ? ಆರಂಭದಲ್ಲಿ ಹೇಳಿದಂತೆ ಸಿಂಹಾಸನದ ಮೇಲೆ ಕುಳಿತುಕೊಳ್ಳಲಾಗುವುದಿಲ್ಲ. ಆದ್ದರಿಂದ ಶಿಕ್ಷಕಿಯರು ಒಬ್ಬೊಬ್ಬರ ಮೇಲೆ ಇಷ್ಟು ಗಮನ ಕೊಡಬೇಕು.

ತಾವು ಗುರಿ - ಉದ್ದೇಶಗಳನ್ನು ಹೇಳುವಾಗ ಏನು ಹೇಳುತ್ತೀರಿ? ದೇವತೆಗಳಾಗಬೇಕು ಎಂಬ ಗುರಿಯನ್ನು ಕೊಡುತ್ತೀರಿ. ದೇವತೆಗಳ ಮಹಿಮೆ ಸರ್ವಗುಣ ಸಂಪನ್ನ ಆಗಿರುವುದರಿಂದ ಈ ಗುರಿಯನ್ನು ಇಟ್ಟುಕೊಳ್ಳಬೇಕು. ಸರ್ವಗುಣಗಳನ್ನೂ ಒಂದೊಂದು ಆತನಲ್ಲಿ ತುಂಬುವ ಪ್ರಯತ್ನ ಮಾಡಬೇಕು. **ನಮ್ಮ ನಿಮಿತ್ತ ಶಿಕ್ಷಕಿ ನಮಗೆ ಈ ಮಾತಿನ ಕಡೆಗೆ ಗಮನ ಕೊಡಿಸಲಿಲ್ಲ ಎಂಬ ದೂರನ್ನು ಯಾವುದೇ ಆತ್ಮವೂ ಕೊಡಲಾರದಂತೆ ಪ್ರತಿಯೊಬ್ಬರಿಗಾಗಿ ಶಿಕ್ಷಕಿಯರು ಪರಿಶ್ರಮ ಮಾಡಬೇಕು.** ಅವರು ಮಾಡಲಿ, ಬಿಡಲಿ ಅದು ಅವರ ಭಾಗ್ಯ ಆದರೆ ತಾವುಗಳು ಎಲ್ಲರ ಬಗೆಗೆ ಪರಿಶ್ರಮ ಪಡಬೇಕು. ಇಲ್ಲವಾದರೆ ಇಲ್ಲಿಯವರೆಗಿನ ಫಲಿತಾಂಶದಲ್ಲಿ ಕೆಲವು ದೂರುಗಳು ಇನ್ನೂವರೆಗೂ ಬರುತ್ತಿವೆ. ಈ ಸೇವೆಯ ಕೊರತೆಯಿದೆ. ಆದ್ದರಿಂದ ಎಲ್ಲಾ ಮಾತುಗಳನ್ನು ಅವರಲ್ಲಿ ತುಂಬುವುದರಿಂದ ಆ ಫಲ ಯೋಗ್ಯವಾಗುವುದು. ಗಣ್ಯ ವ್ಯಕ್ತಿಗಳ ಮುಂದೆ ಎಂತಹ ಹಣ್ಣುಗಳನ್ನು ಇಡುತ್ತಾರೆ ಎಂದು ತಾವು ಯೋಚಿಸಿ? ದೊಡ್ಡದು ಮತ್ತು ಉತ್ತಮವಾಗಿರುವುದನ್ನು ಇಡುತ್ತಾರೆ. ಸಾಕಾರದಲ್ಲಿಯೂ ಯಾವುದೇ ವಸ್ತುವನ್ನು ತರುವಾಗ ಏನನ್ನು ನೋಡುತ್ತಿದ್ದಿರಿ? ಆದ್ದರಿಂದ ಈಗ ಬಾಪ್ ದಾದಾರ ಎದುರಿಗೆ ಇಂತಹ ಹಣ್ಣುಗಳನ್ನು ತಯಾರು ಮಾಡಿದಾಗಲೇ ಸಮ್ಮುಖದಲ್ಲಿ ಇಡಬಲ್ಲಿರಿ. ಆದ್ದರಿಂದ ಇದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಯಾರು ಎಷ್ಟು ಗುಣಗಳಿಂದ ಸಂಪನ್ನವಾಗುತ್ತಾರೋ ಅಷ್ಟು ಬೇರೆಯವರಲ್ಲಿಯೂ ತುಂಬಬಹುದು. ಪ್ರತಿಯೊಬ್ಬ ರಚಯಿತನ ಮುಖ ರಚನೆಯಲ್ಲಿ ಕಂಡುಬರುತ್ತದೆ. ಸೇವೆ ತಮಗೆ ಒಂದು ದರ್ಪಣವಾಗಿದೆ, ಅದರ ಮುಖಾಂತರ ತಮ್ಮೊಳಗಿನ ಸ್ಥಿತಿಯನ್ನು ನೋಡಬಹುದು. ಕನ್ನಡಿಯಲ್ಲಿ ಹೇಗೆ ಮುಖ ಸಹಜವಾಗಿ ಹಾಗೂ ಸ್ಪಷ್ಟವಾಗಿ ಕಂಡುಬರುತ್ತದೆಯೋ ಹಾಗೆಯೇ ಸೇವೆಯ ದರ್ಪಣದಿಂದ ತಮ್ಮ ಮುಖದ ಲಕ್ಷಣಗಳಲ್ಲ, ಸ್ಥಿತಿಯ ಲಕ್ಷಣಗಳು ಸಹಜ, ಸ್ಪಷ್ಟ ಸಾಕ್ಷಾತ್ಕಾರವಾಗುವುದು. ಅದಾಗಿದೆ ಮುಖದ ಕನ್ನಡಿ, ಇದಾಗಿದೆ ಸ್ಥಿತಿಯ ಕನ್ನಡಿ, ಪ್ರತಿಯೊಬ್ಬರಿಗೂ ತಮ್ಮ ಸಾಕ್ಷಾತ್ಕಾರ ಸ್ಪಷ್ಟವಾಗಿ ಆಗುತ್ತದೆಯೇ? ಆಗಬೇಕು. ಇನ್ನೂವರೆಗೂ ಸ್ಪಷ್ಟ ಸಾಕ್ಷಾತ್ಕಾರ ಆಗಿಲ್ಲವಾದರೆ ತಮ್ಮನ್ನು ಸಂಪೂರ್ಣ ಹೇಗೆ ಮಾಡುವಿರಿ? ತಮ್ಮ ದುರ್ಬಲತೆಗಳು ಗೊತ್ತಾದಾಗ ಶಕ್ತಿ ತುಂಬಿಕೊಳ್ಳುವಿರಿ. ಆದ್ದರಿಂದ ತಮಗೆ ಯಾವುದೇ ಸಾಕ್ಷಾತ್ಕಾರ ಆಗಿಲ್ಲವಾದರೆ ನಿಮಿತ್ತರಾಗಿರುವ ಸಹೋದರಿಯರ ಸಹಯೋಗವನ್ನು ಪಡೆದು ತಮ್ಮ ಸ್ಪಷ್ಟ ಸಾಕ್ಷಾತ್ಕಾರ ಮಾಡುವ ಪ್ರಯತ್ನವನ್ನು ಅವಶ್ಯವಾಗಿ ಮಾಡಬೇಕು. ಇದು ಬಾಪ್ ದಾದಾರ ಕೆಲಸವಲ್ಲ, ಸಂಕೇತಗಳನ್ನು ಕೊಡುವುದು ಬಾಪ್ ದಾದಾರ ಕರ್ತವ್ಯವಾಗಿದೆ.

ಶಿಕ್ಷಕಿಯರ ಲಕ್ಷಣಗಳು ಹೇಗಿರಬೇಕು? ಶಿಕ್ಷಕಿಯರು ತಮ್ಮ ಫರಿಶ್ತಾ ಸ್ಥಿತಿಯ ಲಕ್ಷಣಗಳಿಂದ ಸೇವೆ ಮಾಡಬೇಕು. ಶಿಕ್ಷಕಿಯರಿಂದ ಇಲ್ಲಿಯವರೆಗೆ ಇದು ನನ್ನ ಸ್ವಭಾವವೆಂಬ ಶಬ್ದ ಬರಬಾರದು. ಹೀಗೆ ಹೇಳುವುದು ಶಕ್ತಿಹೀನತೆಯ ಲಕ್ಷಣವಾಗಿದೆ. "ಪುರುಷಾರ್ಥ" ಶಬ್ದ, **ಪುರುಷಾರ್ಥ ಎಂಬ ಶಬ್ದವನ್ನು ಸರಿಯಾದ ಅರ್ಥದಲ್ಲಿ ಉಪಯೋಗ ಮಾಡುತ್ತಿಲ್ಲ. ಆದರೆ "ಪುರುಷಾರ್ಥ" ಎಂಬ ಶಬ್ದವನ್ನು ಪುರುಷಾರ್ಥದಿಂದ ಬಿಡಿಸಿಕೊಳ್ಳುವ ಸಾಧನದಂತೆ ಮಾಡಿಕೊಳ್ಳಲಾಗಿದೆ. ಆದ್ದರಿಂದ ತಮ್ಮ ಮಾತುಗಳೇ ತಮ್ಮ ರಚನೆಯಿಂದ ತಮ್ಮೆದುರಿಗೆ ಬರುತ್ತವೆ.** ಆದ್ದರಿಂದ ಗುಮ್ಮಟದಲ್ಲಿ ಮಾಡಿದ ಧ್ವನಿ ಪ್ರತಿಧ್ವನಿಯಾಗುತ್ತದೆ ಎಂದು ಸದಾ ತಿಳಿದುಕೊಳ್ಳಿ. ಇಷ್ಟು ಗಮನವನ್ನು ತಮ್ಮ ಸಂಕಲ್ಪಗಳ ಮೇಲೂ ಇಟ್ಟುಕೊಳ್ಳಬೇಕು. ಅಲ್ಲಿ ಇಲ್ಲಿಯಿಂದ ಸಮಾಚಾರ ಏನೆಂದು ಬರುತ್ತವೆ? ಇತ್ತೀಚೆಗೆ ವಿದ್ಯಾರ್ಥಿಗಳು ಕೇಳುವುದಿಲ್ಲ ಎಂದು. ಪರಿಶ್ರಮ ಮಾಡುತ್ತಾರೆ. ಆದರೆ ಮುಂದುವರೆಯುವುದಿಲ್ಲ, ಅಲ್ಲಿಯೇ ನಿಂತು ಬಿಡುತ್ತಾರೆ. ಈ ಫಲಿತಾಂಶವೇಕೆ? ಇದೂ ಸಹ ತಮ್ಮ ಸ್ಥಿತಿಯ ಪ್ರತ್ಯುತ್ತರವಾಗಿದೆ ಏಕೆಂದರೆ ವಿದ್ಯಾರ್ಥಿಗಳು ನಡೆಯುತ್ತಾ ನಿಮಿತ್ತ ಶಿಕ್ಷಕಿಯರ ದುರ್ಬಲತೆಗಳನ್ನು ಗುರುತಿಸಿ ಅದರ ಲಾಭವನ್ನು ಮಾಡಿಕೊಳ್ಳುತ್ತಾರೆ. ಒಳ್ಳೆಯದು.

ಅವ್ಯಕ್ತ ಮುರಳಿ 22-01-1971.

***ಹೃದಯ ಸಿಂಹಾಸನಾಧಿಕಾರಿ ಆತ್ಮರ ಗುರುತುಗಳು***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ಮೃತಿ ಎಂಬ ತಿಲಕ ಮತ್ತು ಜವಾಬ್ದಾರಿ ಎಂಬ ಕಿರೀಟ ವನ್ನು ಧರಿಸಿರುವ ತಂದೆಯ ಹೃದಯ ಸಿಂಹಾಸನಾಧಿಕಾರಿ.

2. ನನ್ನ ನಯನದಿಂದ ಮತ್ತು ಮುಖದಿಂದ ಸರ್ವಾತ್ಮರ ಪ್ರತಿ ಕಲ್ಯಾಣದ ಶುಭ ಭಾವನೆಯ ಹೊಳಪು ಕಂಡು ಬರುತ್ತಿದೆ.

3. ನನ್ನ ಸಂಕಲ್ಪ, ವಚನ ಮತ್ತು ಕರ್ಮ ತಂದೆಯ ಸಮಾನವಾಗಿ ಇದೆ.

4. ನನ್ನ ಸೇವೆಯಿಂದ ಸರ್ವಾತ್ಮರು ಸ್ನೇಹ, ಸಹಯೋಗ ಮತ್ತು ಶಕ್ತಿ - ಈ ಮೂರು ಗುಣಗಳನ್ನು ಧಾರಣೆ ಮಾಡಿದ್ದಾರೆ.

5. ನಾನು ಏಕೆ, ಏನು ಎಂಬ ಪ್ರಶ್ನೆಗಳನ್ನು ಸಮಾಪ್ತಿ ಮಾಡಿ ಸರ್ವಾತ್ಮರನ್ನು ತಂದೆಗೆ ಸಮೀಪ ಸಂಬಂಧದಲ್ಲಿ ತೆಗೆದುಕೊಂಡು ಬಂದಿದ್ದೇನೆ.

6. ನಾನು ಸರ್ವ ಮರ್ಯಾದೆಗಳನ್ನು (ಈಶ್ವರೀಯ ಮರ್ಯಾದೆಗಳನ್ನು) ಪಾಲಿಸಿ ಶಕ್ತಿಶಾಲಿಯಾಗಿ ತಯಾರಾಗಿ ಸರ್ವಾತ್ಮರನ್ನು ಸ್ನೇಹಿಯಾಗಿ, ಸಹಯೋಗಿಯಾಗಿ, ಶಕ್ತಿಶಾಲಿಸ್ವರೂಪವಾಗಿ ಅರ್ಥಾತ್ ಹೃದಯ ಸಿಂಹಾಸನಾಧಿಕಾರಿಯನ್ನಾಗಿ ತಯಾರು ಮಾಡಿದ್ದೇನೆ.

7. ನನ್ನ ಲಕ್ಷ್ಯ (ದೇವತೆ) ಮತ್ತು ಲಕ್ಷಣಗಳನ್ನು (ಸರ್ವ ಗುಣ ಸಂಪನ್ನ) ಸಮಾನವಾಗಿ ಇಟ್ಟುಕೊಂಡು ಪ್ರತಿ ಒಬ್ಬರಲ್ಲಿ ಸರ್ವ ಗುಣಗಳನ್ನು ತುಂಬುತ್ತಾ ಅವರನ್ನು ಯೋಗ್ಯರನ್ನಾಗಿ ತಯಾರು ಮಾಡುತ್ತಿದ್ದೇನೆ.

8. ನಾನು ಸೇವೆ ಎಂಬ ದರ್ಪಣದಿಂದ ನನ್ನ ಸ್ವಭಾವದ ಸಾಕ್ಷಾತ್ಕಾರವನ್ನು ಸ್ಪಷ್ಟ ಮಾಡಿಕೊಂಡು ಸಂಪೂರ್ಣವಾಗಿ ತಯಾರಾಗಿದ್ದೇನೆ.

9. ನಾನು ಫರಿಶ್ತಾ ಸ್ಥಿತಿಯಿಂದ ಸೇವೆಯನ್ನು ಮಾಡುತ್ತಿದ್ದೇನೆ.

10. ನಾನು ನನ್ನ ಸಂಕಲ್ಪಗಳ ಮೇಲೆ ಪೂರ್ತಿ ಗಮನವನ್ನು ಇಟ್ಟುಕೊಂಡಿದ್ದೇನೆ.